10.	-ಅದೇ-	ಹಳೇ ಅಗ್ರಹಾರ, ಮೈಸೂರು
11.	-ಅದೇ-	ನಜಿರಾಬಾದ್, ಮೈಸೂರು
12.	-ಅದೇ-	ಕೃಷ್ಣಮೂರ್ತಿಪುರಂ, ಮೈಸೂರು
13.	-ಅದೇ-	ವಿಶ್ವೇಶ್ವರನಗರ, ಮೈಸೂರು
14.	-ಅದೇ-	ಚಾಮುಂಡಿಬೆಟ್ಟ, ಮೈಸೂರು

ಸರ್ಕಾರಿ ಆದೇಶದ ಸಂಖ್ಯೆ ಆಕುಕ 349 ಸಿಜಿಎಸ್ 86 ದಿನಾಂಕ 11.05.1987ರಲ್ಲಿ 1987-88ನೇ ಆರ್ಥಿಕ ವರ್ಷದಿಂದ ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳ ಸ್ಥಾಪನೆಯನ್ನು ರದ್ದುಗೊಳಿಸಲಾಗಿದೆ.

ಪದವಿ ಕಾಲೇಜು ಹಾಗೂ ಪದವಿ ಪೂರ್ವ ಕಾಲೇಜು ಉಪನ್ಯಾಸಕರುಗಳ ವೇತನ ತಾರತಮ್ಯ

1029 - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪದವಿ ಕಾಲೇಜು ಉಪನ್ಯಾಸಕರಿಗೂ ಹಾಗೂ ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೂ ಇರುವ ವೇತನ ವ್ಯತ್ಯಾಸಕ್ಕೆ ಕಾರಣಗಳೇನು?

ಆ) ಈ ವೇತನ ತಾರತಮ್ಯ ನಿವಾರಿಸಬೇಕೆಂದು ಪದವಿಪೂರ್ವ ಕಾಲೇಜು ಉಪನ್ಯಾಸಕ ಸಂಘದವರು ಕೋರಿರುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪದವಿ ಕಾಲೇಜುಗಳ ಉಪನ್ಯಾಸಕರುಗಳಿಗೆ ಯುಜಿಸಿ ವೇತನಶ್ರೇಣಿ ನೀಡಲಾಗುತ್ತಿದೆ. ಪದವಿಪೂರ್ವ ಕಾಲೇಜಿನ ಉಪನ್ಯಾಸಕರುಗಳಿಗೆ ರಾಜ್ಯ ವೇತನಶ್ರೇಣಿ ನೀಡಲಾಗುತ್ತಿದೆ.

ಆ) ವೇತನ ಪರಿಷ್ಕರಣೆಯು ಸೇರಿದಂತೆ ಪದವಿಪೂರ್ವ ಶಿಕ್ಷಣ ಇಲಾಖೆಯ ಭೋದಕ, ಭೋದಕೇತರ ಸಿಬ್ಬಂದಿಯ ಹಲವಾರು ಬೇಡಿಕೆಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಜಂಟಿ ಸಮಾಲೋಚನ ಸಮಿತಿಯನ್ನು ರಚಿಸಲಾಗಿದೆ.

ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯ

1031 - ಶ್ರೀ ಸುಬ್ಬಾರೆಡ್ಡಿ ಕೆ.ಎನ್. (ಬಸವನಗುಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುದ್ರಣ ಮತ್ತು ಲೇಖನ ಸಾಮಗ್ರಿಗಳ ನಿರ್ದೇಶನಾಲಯದಿಂದ ಸರ್ಕಾರದ ವಿವಿಧ ಪ್ರಕಟಣೆಗಳನ್ನು ಮುದ್ರಿಸುವುದಕ್ಕೆ ಖಾಸಗಿ ಮುದ್ರಣಾಲಯಗಳಿಗೆ ನೀಡಿರುವ ಹಣವೆಷ್ಟು?

ಅ) *ಸರ್ಕಾರದ ವಿವಿಧ ಪ್ರಕಟಣೆಗಳನ್ನು ಖಾಸಗಿ ಮುದ್ರಣಾಲಯಗಳಿಗೆ ವಹಿಸಲು ಇರುವ ಕಾರಣಗಳೇನು?*

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ರೂ. 80.27 ಲಕ್ಷಗಳನ್ನು ಖರ್ಚುಮಾಡಲಾಗಿದೆ.

ಆ) ಇತ್ತೀಚಿನ ದಿನಗಳಲ್ಲಿ ಮುದ್ರಣ ತಂತ್ರಜ್ಞಾನವು ಬಹಳ ಮುಂದುವರಿದಿದ್ದು, ಬಹುವರ್ಣ ಮುದ್ರಣದ ಯಂತ್ರಗಳು, ಲ್ಯಾಮಿನೇಷನ್, ಸ್ಪಿರಲ್ ಬೈಂಡಿಂಗ್ ಸ್ಟಾಪ್ ಎಂಬೋಸಿಂಗ್ ಇತ್ಯಾದಿಗಳು ಸರ್ಕಾರಿ ಮುದ್ರಣಾಲಯದಲ್ಲಿ ಇಲ್ಲದೆ ಇರುವುದರಿಂದ, ಖಾಸಗಿ ಮುದ್ರಕರಿಂದ ತುರ್ತಾಗಿ ಮುದ್ರಿಸಬೇಕಾಗಿರುತ್ತದೆ. ಹಾಲಿ ಸರ್ಕಾರಿ ಮುದ್ರಣಾಲಯದಲ್ಲಿ ಬಹಳ ಹಳೆಯ ಯಂತ್ರಗಳಿದ್ದು ಕ್ಷೇತ್ರ ಇಲಾಖೆಗಳ ಕೋರಿಕೆಯಂತೆ ಬಹು ವರ್ಣದ ಕೆಲಸಗಳನ್ನು ಮುದ್ರಿಸಲು ಈಗಿನ ಯಂತ್ರಗಳು ಸಾಮರ್ಥ್ಯ ಹೊಂದಿರುವುದಿಲ್ಲ.

ಈ ಕಾರಣಗಳಿಂದ ಕೆಲಸ ತುರ್ತು ಮುದ್ರಣ ಕೆಲಸಗಳನ್ನು ಅಂಗೀಕೃತ ಖಾಸಗಿ ಮುದ್ರಕರಿಂದ ಮುದ್ರಿಸಿಕೊಳ್ಳಬೇಕಾದದ್ದು ಅನಿವಾರ್ಯವಾಗಿರುತ್ತದೆ.

ಸಿಂಧಗಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು

1034 - ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಿಂಧಗಿ ತಾಲ್ಲೂಕಿನಲ್ಲಿಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು?*

ಆ) *1998-99ನೇ ಸಾಲಿನಲ್ಲಿ ಸಿಂಧಗಿ ತಾಲ್ಲೂಕಿನ ಆಸ್ಪತ್ರೆಗಳಿಗೆ ಔಷಧ ಪೂರೈಸಲು ಆಯವ್ಯಯದಲ್ಲಿ ನಿಗಧಿಪಡಿಸಿದ ಮೊತ್ತ ಹಾಗೂ ಬಿಡುಗಡೆಯಾದ ಹಣವೆಷ್ಟು? ಖರ್ಚಾದ ಹಣವೆಷ್ಟು? (ವಿವರ ಒದಗಿಸುವುದು)*

ಇ) *ಸಿಂಧಗಿ ತಾಲ್ಲೂಕಿನಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು?*

ಈ) *ಅವು ಯಾವಾಗ ಪೂರ್ಣಗೊಳ್ಳಲಿವೆ? ಹೊಸ ಕಟ್ಟಡದಲ್ಲಿ ವೈದ್ಯಕೀಯ ಸಲಕರಣೆಗಳು ಇತ್ಯಾದಿಗಳಿಗೆ ಸರ್ಕಾರ ಬಿಡುಗಡೆ ಮಾಡಿರುವ ಮೊತ್ತವೆಷ್ಟು?*

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 11 (ಹನ್ನೊಂದು)

ಆ) ನಿಗಧಿಪಡಿಸಿದ ಮೊತ್ತ ರೂ. 9,51,500.00
ಬಿಡುಗಡೆಯಾದ ಮೊತ್ತ ರೂ. 9,51,500.00
ಖರ್ಚಾದ ಹಣ ರೂ. 9,51,500.00